1. ತಿರುಮಲದಲ್ಲಿರುವ ಛತ್ರದ ಕೊಠಡಿಗಳ ನವೀಕರಣಕ್ಕೆ ತಗಲಬಹುದಾದ ವೆಚ್ಚ ಎಷ್ಟು?

2. ತಿರುಮಲದಲ್ಲಿ ರಾಜ್ಯದ ಭಕ್ತರಿಗಾಗಿ ಹೊಸ ಯೋಜನೆಯನ್ನೇನಾದರೂ ಜಾರಿಗೊಳಿಸಲು ತೀರ್ಮಾನಿಸಿದೆಯೇ? (ವಿವರ ನೀಡುವುದು)

ಶ್ರೀ ಬಾಬುರಾವ್ ಚಿಂಚಸನೂರು (ಮುಜರಾಯಿ ಸಚಿವರು) :—

1. ಪ್ರಸ್ತುತ ಸದರಿ ಛತ್ರದ ಕೊಠಡಿಗಳ ದುರಸ್ಥಿಗೆ ರೂ. 50.71 ಲಕ್ಷಗಳ ವೆಚ್ಚ ತಗಲುವುದೆಂದು ಅಂದಾಜು ಮಾಡಲಾಗಿದೆ.

2. ತಿರುಮಲದಲ್ಲಿ ರಾಜ್ಯದ ಭಕ್ತರಿಗಾಗಿ ಹೆಚ್ಚಿನ ವಸತಿ ಸೌಕರ್ಯವನ್ನು ಕಲ್ಪಿಸುವ ನಿಟ್ಟಿನಲ್ಲಿ ದಾನಿಗಳ ಯೋಜನೆಯಡಿಯಲ್ಲಿ 105 ಕೊಠಡಿಗಳನ್ನು ನಿರ್ಮಿಸುವ ಯೋಜನೆ ಇದ್ದು, ಪ್ರಸ್ತುತ ಜಾಗದ ಬಗ್ಗೆ ಟಿ.ಟಿ.ಡಿ ಮತ್ತು ಕರ್ನಾಟಕ ಸರ್ಕಾರದ ನಡುವೆ ವಿವಾದ ಇದ್ದುದರಿಂದ ಹಾಗೂ ಟಿ.ಟಿ.ಡಿಯವರು ಈ ಕಾಮಗಾರಿಯನ್ನು ಕೈಗೊತ್ತಿಕೊಳ್ಳಲು ಅನುಮತಿ ನೀಡದಿರುವ ಕಾರಣ ಈ ಯೋಜನೆಯನ್ನು ಅನುಷ್ಠಾನಕ್ಕೆ ತರುವುದರಲ್ಲಿ ವಿಳಂಬವಾಗಿರುತ್ತದೆ.

ಗಡಿ ಪ್ರದೇಶಗಳ ವ್ಯಾಪ್ತಿಯಲ್ಲಿ ಪೊಲೀಸ್ ವ್ಯವಸ್ಥೆ ಬಲವರ್ಧನೆ

2437 (2886) ಶ್ರೀ ಎಸ್. ಶಿವಣ್ಣ (ತುಮಕೂರು) :— ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಗಡಿ ಪ್ರದೇಶಗಳ ವ್ಯಾಪ್ತಿಯ ಸ್ಥಳಗಳಿಗೆ ನಕ್ಸಲೀಯ ಹಾಗೂ ಕಾನೂನು ಬಾಹಿರ ಚಟುವಟಿಕೆ ತಡೆಗೆ ಯಾವ ಮುಂಜಾಗರೂಕತಾ ಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಆ) ಗಡಿ ಭಾಗದ ಠಾಣೆಗಳಿಗೆ ಆಧುನಿಕ ಶಸ್ತ್ರಾಸ್ತ್ರ ಸರಬರಾಜು ಮಾಡಲು ತೀರ್ಮಾನಿಸಲಾಗಿದೆಯೇ?

ಇ) ಈ ಠಾಣೆಗಳ ಸಿಬ್ಬಂದಿಗೆ ನೀಡುವ ಇನ್ನಿತರ ರಕ್ಷಣಾ ಕ್ರಮಗಳ್ಯಾವುವು?

ಈ) ಈ ರೀತಿ ಗುರುತಿಸಲ್ಪಟ್ಟ ಸ್ಥಳಗಳು ಯಾವುವು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು) :—

ಅ) ರಾಜ್ಯ ಸರ್ಕಾರ ಸಂಬಂಧಪಟ್ಟ ಜಿಲ್ಲಾಧಿಕಾರಿಗಳು, ಮುಖ್ಯ ಕಾರ್ಯ ನಿರ್ವಾಹಣಾಧಿಕಾರಿಗಳು, ಮತ್ತು ಪೊಲೀಸ್ ಅಧೀಕ್ಷಕರುಗಳಿಗೆ ಸಭೆ ನಡೆಸಿ ಈ ಬಗ್ಗೆ

ಸೂಕ್ತ ಸೂಚನೆಗಳನ್ನು ನೀಡಲಾಗಿದೆ. ಅಭಿವೃದ್ಧಿ ಕಾರ್ಯ ಕ್ರಮಗಳನ್ನು ಸಮರ್ಪಕ ರೀತಿಯಲ್ಲಿ ಅನುಷ್ಠಾನಕ್ಕೆ ತರಲು ಸೂಕ್ತ ಗಮನಹರಿಸುವಂತೆ ಸೂಚಿಸಲಾಗಿದೆ.

ನಕ್ಸಲೀಯ ಚಟುವಟಿಕೆಗಳ ಬಗ್ಗೆ ವಿಶೇಷ ನಿಗಾವಹಿಸಲು ಗುಪ್ತದಳ ಅಧಿಕಾರಿಗಳಿಗೆ ಸೂಚಿಸಲಾಗಿದೆ.

೫) ಹೌದು. ಈ ಕೆಳಕಂಡ ವಿಷಯಗಳ ಬಗ್ಗೆ ಕ್ರಮವನ್ನು ತೆಗೆದುಕೊಳ್ಳಲಾಗುವುದು.

ಅ) ಸಂಬಂಧಿಸಿದ ಪೊಲೀಸ್ ಠಾಣೆಗಳನ್ನು ಬಲಪಡಿಸುವುದು ಮತ್ತು ಪೊಲೀಸ್ ಠಾಣೆಗಳಿಗಾಗಿ ನೂತನ ಕಟ್ಟಡವನ್ನು ನಿರ್ಮಿಸುವುದು.

ಆ) ಪೋಲೀಸ್ ಸಿಬ್ಬಂದಿಗಳನ್ನು ಹೆಚ್ಚಿಸುವುದು.

ಇ) ಸಾರಿಗೆ ವ್ಯವಸ್ಥೆಯನ್ನು ಉತ್ತಮಗೊಳಿಸುವುದು.

ಈ) ಆಧುನಿಕ ಸಂಪರ್ಕ ಜಾಲವನ್ನುಅಳವಡಿಸುವುದು.

೬) ರಾಯಚೂರು, ತುಮಕೂರು, ಗುಲ್ಬರ್ಗಾ, ಕೋಲಾರ ಹಾಗೂ ಬೀದರ್ ಜಿಲ್ಲೆಗಳು.

ತುಮಕೂರು ನಗರದಲ್ಲಿ ಕುಡಿಯುವ ನೀರಿನ ಸರಬರಾಜು ಯೋಜನೆ

2438(2887) ಶ್ರೀ ಶಿವಣ್ಣ ಎಸ್. (ತುಮಕೂರು) :— ಮಾನ್ಯ ಮುಖ್ಯ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1. ಕಳೆದ ಮೂರು ವರ್ಷದ ಅವಧಿಯಲ್ಲಿ ರಾಜ್ಯದಲ್ಲಿ ನಗರ ನೀರು ಸರಬರಾಜು ಹಾಗೂ ಒಳಚರಂಡಿ ಮಂಡಳಿಯಿಂದ ತೆಗೆದುಕೊಂಡ ಕುಡಿಯುವ ನೀರು ಸರಬರಾಜು ಯೋಜನೆಗಳೆಷ್ಟು? ವಿವರ ಹಾಗೂ ಅವುಗಳ ಅಂದಾಜು ಮೊತ್ತದ ಯಾದಿಯನ್ನು ಒದಗಿಸುವುದು.

2. ಈ ಯೋಜನೆಗಳು ನಿಗಧಿತ ಅವಧಿಯಲ್ಲಿ ಪೂರ್ಣಗೊಂಡಿದೆಯೇ ಹಾಗೂ ಸಮರ್ಪಕವಾಗಿ ಕಾರ್ಯ ನಿರ್ವಹಿಸುತ್ತದೆಯೇ, ನ್ಯೂನತೆ ಇರುವ ಯೋಜನೆಗಳೆಷ್ಟು?

3. ತುಮಕೂರು ನಗರದಲ್ಲಿ 1994ರಲ್ಲಿ ತೆಗೆದುಕೊಂಡ ಈ ಯೋಜನೆ ಸಮರ್ಪಕವಾಗಿ ಕಾರ್ಯ ನಿರ್ವಹಿಸುತ್ತಿದೆಯೇ? ಇಲ್ಲವಾದಲ್ಲಿ ಕಾರಣವೇನು? ನ್ಯೂನತೆ ಸರಿಪಡಿಸಲು ಯಾವ ಕ್ರಮ ಕೈಗೊಳ್ಳಲಾಗಿದೆ?

4. ನಿಗಧಿತ ಅವಧಿಯಲ್ಲಿ ಕಾಮಗಾರಿ ಪೂರ್ಣಗೊಳಿಸದೇ ಇರುವ ಮತ್ತು ಕಳಪೆ ಕಾಮಗಾರಿ ನಿರ್ವಹಿಸಿರುವ ಗುತ್ತಿಗೆದಾರರ : ಅಧಿಕಾರಿಗಳ ವಿರುದ್ಧ ಸರ್ಕಾರ ಯಾವುದಾದರೂ ಕ್ರಮ ಕೈಗೊಂಡಿದೆಯೇ? (ಇದ್ದಲ್ಲಿ ಕಾಮಗಾರಿವಾರು, ಗುತ್ತಿಗೆವಾರು ಮಾಹಿತಿ ಒದಗಿಸುವುದು)